ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrar@bcu.ac.in

ಸಂಖ್ಯೆ:ಬಿಸಿಯು/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/08/2023–24

ದಿನಾಂಕ:04.11.2023

# ಸುತ್ತೋಲೆ

**ವಿಷಯ:** ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ/ಶಿಕ್ಷಣ ಸಂಸ್ಥೆಗಳಲ್ಲಿ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಮಯದಲ್ಲಿ ಶುಲ್ಕಗಳನ್ನು ಪಾವತಿಸಲು ಓತ್ತಾಯಿಸದ ಬಗ್ಗೆ:-

**ಉಲ್ಲೇಖ:** 1. ಸರ್ಕಾರ ಆದೇಶ ಸಂಖ್ಯೆ: SWD/EDU/ED3/91/2023 ಬೆಂಗಳೂರು ದಿನಾಂಕ:03.07.2023

2. ಸರ್ಕಾರದ ಆದೇಶ ಸಂಖ್ಯೆ: ಸಕಇ/STP/108/2023 ದಿನಾಂಕ:25.08.2023
3. ದಿನಾಂಕ:02.11.2023ರಂದು ಜರುಗಿದ ಪ್ರವೇಶಾತಿ ಸಮಿತಿ ಸಭೆಯ ತೀರ್ಮಾನ
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:04.11.2023

*************

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ದಿನಾಂಕ:02.11.2023 ರಂದು ಸರ್ಕಾರದಿಂದ ಹೊರಡಿಸಿರುವ ಉಲ್ಲೇಖ 1 ಮತ್ತು 2 ರ ಬಗ್ಗೆ ದೀರ್ಘವಾಗಿ ಚರ್ಚಿಸಿ, ಸರ್ಕಾರ ಹೊರಡಿಸಿರುವ ಉಲ್ಲೇಖ 1 ಮತ್ತು 2 ರ ಆದೇಶದಲ್ಲಿ ನಮೂದಿಸಿರುವ ಅಂಶಗಳನ್ನು ಪಾಲನೆ ಮಾಡುವುದರ ಜೊತೆಗೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದಿಳಿದ ವರ್ಗದ ಪ್ರವರ್ಗ I ಕ್ಕೆ ಸೇರಿದ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಕಾರ್ಯಕ್ರಮದಡಿ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ. ವಿಶ್ವವಿದ್ಯಾನಿಲಯವು ಆಯಾ ಕೋರ್ಸಿಗೆ ನಿಗದಿಮಾಡಿರುವ ಶುಲ್ಕವನ್ನು ಸರ್ಕಾರವು ಮರುಪಾವತಿ ಮಾಡಲಾಗುತ್ತಿದೆ. ಹಾಗೂ ಸದರಿ ಮೊತ್ತವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ DBT ಮೂಲಕ ವರ್ಗಾವಣೆ ಮಾಡಲಾಗುತ್ತದೆ. ನಂತರದಲ್ಲಿ ಸಂಬಂಧಪಟ್ಟ ಕಾಲೇಜಿಗೆ ಪಾವತಿಸಲು ವಿದ್ಯಾರ್ಥಿಗಳಿಗೆ ಸೂಚಿಸಬೇಕಾಗಿದೆ.

ದಾಖಾಲಾತಿ ಸಮಯದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಪಡೆದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ I ಕ್ಕೆ ಸೇರಿರುವ ವಿದ್ಯಾರ್ಥಿಗಳಿಂದ ಯಾವುದೇ ಕಡ್ಡಾಯ ಶುಲ್ಕ ಪಾವತಿ ಮಾಡುವಂತೆ ಒತ್ತಾಯ ಮಾಡಬಾರದೆಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ಸೂಚಿಸಿದೆ.

2023–24ನೇ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ ದಾಖಲಾಗುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ I ಕ್ಕೆ ಸೇರಿದ ವಿದ್ಯಾರ್ಥಿಗಳ ಪೋಷಕರ ವರಮಾನ ರೂ.2.50 ಲಕ್ಷದ ಮಿತಿಯೊಳಗೆ ಇರುವ ವಿದ್ಯಾರ್ಥಿಗಳಿಂದ ರೂ.365/–ಗಳನ್ನು ಪ್ರವೇಶಾತಿ ಶುಲ್ಕವನ್ನಾಗಿ ಪಡೆಯತಕ್ಕದ್ದು, ಉಳಿದ ಪ್ರವೇಶಾತಿ ಶುಲ್ಕದ ಬಾಕಿ ಶುಲ್ಕವನ್ನು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರಾತಿಯಾದ ನಂತರ, ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಬಾಕಿ ಶುಲ್ಕವನ್ನು ವಸೂಲು ಮಾಡಿ ವಿಶ್ವವಿದ್ಯಾನಿಲಯಕ್ಕೆ ಜಮಾ ಮಾಡುವ ಜವಬ್ದಾರಿಯು ಆಯಾ ವಿಭಾಗದ ಮುಖ್ಯಸ್ಥರ ಜವಬ್ದಾರಿಯಾಗಿರುತ್ತದೆ.

ಇತರೆ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯವು ನಿಗದಿಗೊಳಿಸಿರುವ ಶುಲ್ಕವನ್ನು ಯಥಾವತ್ತಾಗಿ ಪ್ರವೇಶಾತಿ ಸಮಯದಲ್ಲಿ ವಸೂಲಿಮಾಡಿ, ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡುವ ಬಗ್ಗೆ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಕುಲಸಚಿವರು

ಮು.ತಿ.ನೋ

ಗೆ,

1. ಮುಖ್ಯಸ್ಥರು, ಸ್ನಾತಕೋತ್ತರ ಪದವಿ ವಿಭಾಗಗಳು, ಬೆಂ.ನ.ವಿ, ಬೆಂಗಳೂರು
2. ಪ್ರಾಂಶುಪಾಲರು ಸಂಯೋಜಿತ ಕಾಲೇಜುಗಳು, ಬೆಂ.ನ.ವಿ, ಬೆಂಗಳೂರು

**ಪ್ರತಿಗಳು:**

1. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ), ವಿತ್ತಾಧಿಕಾರಿಗಳರವರ ಆಪ್ತ ಕಾರ್ಯದರ್ಶಿಗಳು, ಬೆ.ನ.ವಿ.ಬೆಂಗಳೂರು.
2. ಅಂತರ್ಜಾಲದ ಪ್ರತಿ/ UUCMS Portal.
3. ಕಛೇರಿ ಪ್ರತಿ/ರಕ್ಷಾ ಕಡತ.